ಮುಖ್ಯವಾದುದು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಈಗ ನಾವು ಇದೇ ಪ್ರಶ್ನೆಯನ್ನು ಇನ್ನೂ ಹತ್ತು ನಿಮಿಷಗಳ ಮುಂದುವರಿಸಿ ಮುಗಿಸೋಣವೆ? ಅಥವಾ ಪ್ರಮುಖವಾದ ಈ ವಿಚಾರವನ್ನು ಅರ್ಧಗಂಟೆಯ ಕಾಲಾವಧಿಯ ವಿಷಯವನ್ನಾಗಿರಿಸಿಕೊಂಡು ಚರ್ಚೆಗೆ ಅವಕಾಶ ಕೊಡೋಣವೇ ಎಂಬುದನ್ನು ತಾವುಗಳೇ ನಿರ್ಧರಿಸಿ ಹೇಳಿ. ಮಾನ್ಯ ಸದಸ್ಯರುಗಳಲ್ಲಿ ಯಾರಾದರೂ ಒಬ್ಬರು ಲಿಖಿತ ಮೂಲಕ ಪ್ರಸ್ತಾವನೆಗಾಗಿ ಬರೆದು ಕಳುಹಿಸಬೇಕು. ನಾನೇ ನಿರ್ಧಾರವನ್ನು ತೆಗೆದುಕೊಳ್ಳುವಂತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅರ್ಧಗಂಟೆ ಕಾಲಾವಧಿಯ ಪ್ರಸ್ತಾವನೆಗೆ ತಾವುಗಳು ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಅಧ್ಯಕ್ಷರು:- ಈ ಪ್ರಮುಖವಾದ ವಿಚಾರವನ್ನು ಅರ್ಧಗಂಟೆ ಕಾಲಾವಧಿಯ ಪ್ರಸ್ತಾವನೆಯಾಗಿ ತೆಗೆದುಕೊಳ್ಳಬಹುದು.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ದೈಹಿಕ ಶಿಕ್ಷಕರುಗಳಿಗೆ ಮುಂಬಡ್ತಿ

80 (784) ಶ್ರೀ ಜಯಪ್ರಕಾಶ್ ಹೆಗಡೆ ಕೆ. ಬ್ರಹ್ಮಾವರ):- ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

1. ರಾಜ್ಯದಲ್ಲಿ ಖಾಸಗಿ ಮತ್ತು ಸರಕಾರದ ಪ್ರೌಢಶಾಲೆಗಲ್ಲಿ ಸತತವಾಗಿ ಸೇವೆ ಸಲ್ಲಿಸುತ್ತಿದ್ದ ದೈಹಿಕ ಶಿಕ್ಷಕರಿಗೆ ಪದೋನ್ನತಿ ಇಲ್ಲದಿರುವುದು ನಿಜವಲ್ಲವೆ ಈ ಶಿಕ್ಷಕರಿಗೆ ಬಡ್ತಿಯನ್ನೊಳಗೊಂಡಂತೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರಕಾರದವರು ಈಗಾಗಲೇ ನಿರ್ಧರಿಸಿರುವುದು ನಿಜವಲ್ಲವೆ (ವಿವರ ನೀಡುವುದು)

2. ಸದರಿ ಪ್ರೌಢ ಶಾಲೆಗಳಲ್ಲಿನ ದೈಹಿಕ ಶಿಕ್ಷಕರಿಗೆ ಗ್ರೇಡ್-1 ಮತ್ತು ಗ್ರೇಡ್-2 ಎಂದು ಬಡ್ತಿ ಸೌಲಭ್ಯಗಳನ್ನು ವಿಂಗಡಿಸಲಾಗಿದೆಯೇ? (ವೇತನ ಶ್ರೇಣಿ ಸಹಿತ ಗ್ರೇಡ್-1 ಮತ್ತು ಗ್ರೇಡ್-2 ದೈಹಿಕ ಶಿಕ್ಷಕ ಶ್ರೇಣಿಯ ಬಡ್ತಿ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

3. ಸರ್ಕಾರದ ಪ್ರೌಢಶಾಲೆಗಳಲ್ಲಿನ ದೈಹಿಕ ಶಿಕ್ಷಕರಿಗೆ ಒದಗಿಸಿರುವ ಬಡ್ತಿ ಸೌಲಭ್ಯಗಳನ್ನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುವ ದೈಹಿಕ ಶಿಕ್ಷಕರಿಗೆ ವಿಸ್ತರಿಸುವ ಬಗ್ಗೆ ಸರ್ಕಾರದ ಕ್ರಮಗಳೇನು? (ನಿವರಗಳನ್ನು ನೀಡುವುದು)

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಪ್ರೌಢಶಿಕ್ಷಣ ಸಚಿವರು):-

1. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಪಿ.ಇಡಿ ಪದವಿಯನ್ನು ಹೊಂದಿರುವ ಗ್ರೇಡ್-2 ದೈಹಿಕ ಶಿಕ್ಷಕರಿಗೆ ಸೇವಾ ಜೇಷ್ಠತೆಯನ್ನು ಆಧರಿಸಿ ಗ್ರೇಡ್-1 ದೈಹಿಕ ಶಿಕ್ಷಕರಾಗಿ ವೃಂದ ಮತ್ತು ನೇಮಕಾತಿ ನಿಯಮದಂತೆ ಬಡ್ತಿ ನೀಡಲಾಗುತ್ತಿದೆ. ಅದೇ ರೀತಿ ಗ್ರೇಡ್-1 ದೈಹಿಕ ಶಿಕ್ಷಕರಿಗೆ ಹಿರಿಯ ಗ್ರೇಡ್-1 ದೈಹಿಕ ಶಿಕ್ಷಕರಾಗೂ ಬಡ್ತಿ ನೀಡಲು ಸರ್ಕಾರಿ ಆದೇಶವಾಗಿದೆ. ಈ ಬಗ್ಗೆ ವೃಂದ ತಿದ್ದುಪಡಿ ತಂದ ನಂತರ ಬಡ್ತಿ ನೀಡಲಾಗುವುದು.

2. ವೃಂದ ಮತ್ತು ನೇಮಕಾತಿ ನಿಯಮದಂತೆ ಗ್ರೇಡ್-2 ದೈಹಿಕ ಶಿಕ್ಷಕರಿಗೆ (3300-6300) ಗ್ರೇಡ್-1 ದೈಹಿಕ ಶಿಕ್ಷಕರಾಗಿ (3300-6300) ಗ್ರೇಡ್-1 ದೈಹಿಕ ಶಿಕ್ಷಕರಾಗಿ (4575-8400) ಬಡ್ತಿ ನೀಡಲಾಗುತ್ತಿದೆ. ಗ್ರೇಡ್-1 ದೈಹಿಕ ಶಿಕ್ಷಕರಿಗೆ ಹಿರಿಯ ಗ್ರೇಡ್-1 ದೈಹಿಕ ಶಿಕ್ಷಕರಾಗಿ ಬಡ್ತಿ ನೀಡುವ ಬಗ್ಗೆ ಮೆಲಿನ ಪ್ರಶ್ನೆಗೆ ಉತ್ತರದಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗುವುದು.

3. ಅನುದಾನಿತ ಪ್ರೌಢಶಾಲೆಗಳಲ್ಲಿ ಗ್ರೇಡ್-1 ದೈಹಿಕ ಶಿಕ್ಷಕರ ಹುದ್ದೆಗೆ ಸರ್ಕಾರದ ಆದೇಶ ದಿನಾಂಕ:2-2-2000ರಲ್ಲಿ ನೇರ ನೇಮಾಕಾತಿ ಮೂಲಕ ತುಂಬಲು ನಿಯಮಗಳಲ್ಲಿ ಅವಕಾಶವಿರುತ್ತದೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಸೂಕ್ತ ತಿದ್ದುಪಡಿ ತಂದ ನಂತರ ಬಡ್ತಿ ನೀಡಲಾಗುವುದು ಎಂದು ಹೇಳಿದ್ದಾರೆ. ಹಾಗಾದರೆ ತಾವುಗಳು ಯಾವಾಗ ಇದಕ್ಕೆ ತಿದ್ದುಪಡಿಯನ್ನು ತರುತ್ತೀರಿ? ಮೂರನೆ ಪ್ರಶ್ನೆಯಲ್ಲಿ ನಾನು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುವ ದೈಹಿಕ ಶಿಕ್ಷಕರಿಗೆ ಬಡ್ತಿಯನು ವಿಸ್ತರಿಸುವ ಬಗ್ಗೆ ಸರಕಾರದ ಕ್ರಮಗಳೇನು? ಎಂದು ಕೇಳಿದ್ದೆ. ಅದಕ್ಕೆ ಉತ್ತರವಾಗಿ ನೇರ ನೇಮಕಾತಿಯ ಮೂಲಕ ತುಂಬಲು ನಿಯಮಗಳಲ್ಲಿ ಅವಕಾಶವಿದೆ ಎಂದು ಹೇಳಿದ್ದಾರೆ. ನಾನು, ಪ್ರಮೋಷನ್ ಬಗ್ಗೆ ಅವಕಾಶವನ್ನು ಸ್ಪಷ್ಟವಾಗಿ ಕಲ್ಪಿಸಿದ್ದೀರಾ? ಇಲ್ಲವಾದಲ್ಲಿ ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೇ, ಗ್ರೇಡ್-2ರಿಂದ ಗ್ರೇಡ್-1ಕ್ಕೆ ಬಡ್ತಿ ಕೊಡುವುದಕ್ಕೆ ನಮ್ಮ ನಿಯಮಗಳಲ್ಲಿ ಅವಕಾಶವಿದ್ದು ಆ ಪ್ರಕಾರ ಬಡ್ತಿಯನ್ನು ಕೊಡುತ್ತಿದ್ದೇವೆ. ಅಂದರೆ ಅವರು ಬಿಪಿ ಎಡ್ ಪಾಸ್ ಸೀನಿಯಾರಿಟಿ ಮೇಲೆ ಕೊಡುತ್ತಿದ್ದೇವೆ. ಹಾಗೆಯೇ ಗ್ರೇಡ್-1 ರಲ್ಲಿ, ಸೀನಿಯರ್ ಗ್ರೇಡ್-1 ರಲ್ಲಿ ಬಡ್ತಿ ಕೊಡುವುದಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿಯನ್ನು ಬಹಳ ಶೀಘ್ರವಾಗಿ ನಾವು ತರುತ್ತಿದ್ದೇವೆ. ತಾವುಗಳು ಖಾಸಗಿ ಶಾಲೆಗಳ ಕುರಿತು ಕೇಳಿರುತ್ತೀರಿ. ಖಾಸಗಿ ಶಾಲೆಗಳಲ್ಲಿ 25 ಪರ್‌ಸೆಂಟ್‌ಗೆ ನಾವು ಗ್ರೇಡ್-1 ಕ್ಕೆ ಪ್ರಮೋಶನ್ ಕೊಡುವುದು ಇದೆ. ಹೀಗೆ ಒಂದೊಂದೇ ಶಾಲೆ, ಇದ್ದರೆ ಅಲ್ಲಿ ಬರುವುದಿಲ್ಲ. ಬಹುಶಃ ದೊಡ್ಡ ದೊಡ್ಡ ಆಡಳಿತ ಮಂಡಳಿಗಳ ಸಂಸ್ಥೆಗಳಲ್ಲಿ 25-50 ಶಾಲೆಗಳು ಇರುತ್ತವೆ. ಅವುಗಳನ್ನು ಒಟ್ಟಾರೆ ಕ್ರೋಢೀಕರಿಸಿದಾಗ ಅವರಿಗೆ ಅನುಕೂಲ ಆಗುತ್ತದೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ:- ಸರಕಾರಿ ಶಾಲೆಗಳಲ್ಲಿ ಅವರಿಗೆ ಯಾವ ಸೌಲಭ್ಯಗಳನ್ನು ಕೊಟ್ಟಿದ್ದೀರಿ ಅದನ್ನು ಖಾಸಗಿಯವರಿಗೂ ದೊರಕಿಸಿಕೊಡುತ್ತೀರಾ? ಒಂದೊಂದು ಶಾಲೆ ಇದ್ದರೆ ಆಗುವುದಿಲ್ಲ ಎಂದು ಹೆಳಿದ್ದೀರಿ.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೆ, ನಮ್ಮ ನಿಯಮಾವಳಿಗಳ ಪ್ರಕಾರ ಎಲ್ಲೆಲ್ಲಿ ಅವಕಾಶವಾಗುತ್ತದೋ ಅಲ್ಲಿ ಕೊಡುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ತಾವುಗಳು ಖಾಸಗಿ ಶಾಲೆಗಳಲ್ಲಿಯೂ ಕೂಡ ಹೆಚ್ಚುವರಿ ಬೀಚರ್ಸ್‌ನ್ನು ವರ್ಗಾವಣೆ ಮಾಡುತ್ತಿದ್ದೀರಿ. ಅದೇ ರೀತಿಯಲ್ಲಿ ಅವರಿಗೂ ಪ್ರಮೋಷನ್ ವಿಚಾರದಲ್ಲಿ ಅವಕಾಶವನ್ನು ಕಲ್ಪಿಸಿಕೊಡಬಹುದಲ್ಲವೆ? ಟ್ರಾನ್ಸ್‌ಫರ್ ಮಾಡಲು ಸಾಧ್ಯವಾಗುವುದಾದರೆ ಪ್ರಮೋಷನ್ ಕೊಡಲು ಏತಕ್ಕೆ ಸಾಧ್ಯವಾಗುವುದಿಲ್ಲ?

ಶ್ರೀ ಹೆಚ್. ವಿಶ್ವನಾಥ್:- ನಮ್ಮ ವ್ಯಂದ ಮತ್ತು ನೇಮಕಾತಿ ನಿಯಮಗಳಡಿಯಲ್ಲಿ ಅವಕಾಶವಿದ್ದರೆ ಸಾಧ್ಯವಾದ ಕಡೆಗಳೆಲ್ಲೆಲ್ಲಾ ನಾವು ಮಾಡಿಕೊಡುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಪ್ರಶ್ನೆಗೆ ಸ್ವಲ್ಪ ಸಮಯಾವಕಾಶವನ್ನು ಕೋರಿದ್ದಾರೆ. ತಾವುಗಳು ರಾಜ್ಯದಲ್ಲಿನ ಪೂರ್ಣ ವಿವರಗಳನ್ನು ಕುರಿತಾಗಿ ಕೇಳಿರುತ್ತೀರಿ. ಪ್ರಶ್ನೆಗೆ ವಿಷಯಸಂಗ್ರಹಣೆ ಮಾಡಿ ವಿವರವಾಗಿ ಉತ್ತರಿಸಲು 15 ದಿನಗಳ ಕಾಲಾವಕಾಶಬೇಕೆಂದು ಕೋರಿಕೊಂಡಿದ್ದಾರೆ.

ಶ್ರೀ ವಿಶ್ವೇಶ್ವ ರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಪ್ರಶ್ನೆಯನ್ನು ನಾನು ಕೇಳಿದ ಉದ್ದೇಶವೇನೆಂದರೆ, ನಾವುಗಳು ಮಲೆನಾಡು ಪ್ರದೇಶದಿಂದ ಬಂದವರು. ನಮ್ಮ ಗ್ರಾಮಾಂತರ ಪ್ರದೇಶದ ರಸ್ತೆಗಳು ತುಂಬಾ ಹಾಳಾಗಿ ಹೋಗಿದೆ. ಹೀಗಾಗಿ ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋಗುವ ಹಾಗಿಲ್ಲವಾಗಿದೆ. ಮಳೆ ಅತಿಯಾಗಿ ಇದ್ದ ರಸ್ತೆಗಳೆಲ್ಲ ಹಾಳಾಗಿ ಹೋಗಿವೆ.

ಅಧ್ಯಕ್ಷರು:- ತಾವುಗಳು ಕೇವಲ ಮಲೆನಾಡು ಪ್ರದೇಶಕ್ಕೆ ಸೀಮಿತವಾಗಿ ಕೇಳಿಲ್ಲ. ನೀವು ಸಮಗ್ರ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ವಿವರಗಳನ್ನು ಕೇಳಿದ್ದರಿಂದ ವಿವರವಾದ ಸಂಗ್ರಹಣೆಗೆ ಸಮಯಾವಕಾಶ ಕೇಳಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ:- ಈಗ ಅತ್ಯಾಧುನಿಕ ಯುಗ. ಎಲ್ಲಾ ವಿವರಗಳನ್ನು ಅರ್ಧಗಂಟೆಯಲ್ಲಿ ಸಂಗ್ರಹಣೆ ಮಾಡಬಹುದೆಂದು ಹೇಳುತ್ತಿದ್ದಾರೆ. ಹೈಟೆಕ್ ಗೌರ್ನಮೆಂಟ್ ಎಂದು ಹೇಳುತ್ತಾರೆ. ಪ್ರತಿಯೊಂದು ಜಿಲ್ಲೆಯ ಮಾಹಿತಿಗಳನ್ನು ಈಗ ತರಿಸಿಕೊಳ್ಳುವುದು ಕಷ್ಟಸಾಧ್ಯವೇ?

ಅಧ್ಯಕ್ಷರು:- ಮಾನ್ಯ ಸಚಿವರು ವಿವರವಾದ ಉತ್ತರ ಕೊಡಲು 15 ದಿವಸಗಳ ಕಾಲಾವಧಿ ಬೇಕೆಂದು ಕೇಳಿಕೊಂಡಿದ್ದಾರೆ. ಅವರು ಕೇಳಿದ್ದರಿಂದ ನಾವು ಸಮಯಾವಕಾಶ ಕೊಡಬೇಕಾಗುತ್ತದೆ. ಸದಸ್ಯರುಗಳ ಕೋರಿಕೆಯನ್ನು ಗಮನದಲ್ಲಿಟ್ಟುಕೊಂಡು ಉತ್ತರವನ್ನು ಒಂದು ವಾರದೊಳಗಾಗಿ ಒದಗಿಸಿಕೊಡಿ (ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಸೂಚಿಸಿದರು)

ಶ್ರೀ ಡಿ.ವಿ. ಸದಾನಂದಗೌಡ:- ವಿವರಗಳನ್ನು ಕೂಡಲೇ ತರಿಸಿಕೊಳ್ಳಬಹುದು.

ಅಧ್ಯಕ್ಷರು:- ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರವನ್ನು ಮುಂದಿನ ವಾರದೊಳಗಾಗಿ ಒದಗಿಸಿಕೊಡಿ.

ಶ್ರೀ ಎಂ.ವೈ.ಘೋರ್ಪಡೆ:- ಒಂದು ವಾರದೊಳಗಾಗಿ ಉತ್ತರಗಳನ್ನು ಒದಗಿಸಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮುಂದಿನ ವಾರದಲ್ಲಿ ಅಧಿವೇಶನ ಇರುವುದಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು:- ಅಧಿವೇಶನ ಇಲ್ಲವೆಂದು ಯಾರು ಹೇಳಿದ್ದು? ಆ ಬಗ್ಗೆ ನಾವಿನ್ನೂ ಡಿಸೈಡ್ ಮಾಡಿಲ್ಲ. ಮುಂದಿನ ವಾರದಲ್ಲೂ ಇರಬಹುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೇ, ನಮ್ಮ ರಸ್ತೆಗಳ ಪರಿಸ್ಥಿತಿಯು ತುಂಬಾ ಹಾಳಾಗಿ ಹೋಗುತ್ತಿದೆ. ಹೀಗೆ ಅವಕಾಶವನ್ನು ಕೊಟ್ಟರೆ ಅಲ್ಲಿ ರಸ್ತೆಗಳಿಗೆ ಮಣ್ಣು ಹಾಕುವವರೂ ಕೂಡ ಇಲ್ಲ. ಹೊಸತಾಗಿ ಮತ್ತೆ ಮಳೆಗಾಲ ಪ್ರಾರಂಭವಾಗುವ ಸಮಯವೂ ಬಂತು.

ಅಧ್ಯಕ್ಷರು:- ಅವರು ವಿವರಗಳನ್ನು ಸಂಗ್ರಹ ಮಾಡಬೇಕಾದುದರಿಂದ 15 ದಿನಗಳ ಕಾಲಾವಕಾಶವನ್ನು ಕೇಳಿದ್ದರು. ನಾನು ಒಂದು ವಾರದಲ್ಲಿ ಉತ್ತರ ಕೊಡಲು, ಕೇಳಿಕೊಂಡ ಮೇರೆಗೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮಗೆ ಒಂದು ವಾರದಲ್ಲಿ ರಸ್ತೆಯ ರಿಪೇರಿ ಆಗಬೇಕಾಗಿದೆ. ಆದರೆ ಉತ್ತರಕೊಡಲು ಒಂದು ವಾರವನು ಕೇಳುತ್ತಿದ್ದಾರೆ.

ಶ್ರೀ ಎಂ. ವೈ ಘೋರ್ಪಡೆ:- ಮಾನ್ಯ ಸದಸ್ಯರು ವಿವರವಾದ ಪಟ್ಟಿಯನ್ನು ಕೇಳಿದ್ದಾರೆ. ರಾಜ್ಯದಲ್ಲಿ ಯಾವ ಯಾವ ಗ್ರಾಮೀಣ ರಸ್ತೆಯನ್ನು ಅಭಿವೃದ್ಧಿಗಾಗಿ ತೆಗೆದುಕೊಂಡಿದ್ದೀರಿ ಎಂದು ಕೇಳಿದ ಕಾರಣ ವಿವರ ಸಂಗ್ರಹಿಸಲು ಒಂದು ವಾರದ ಅವಕಾಶ ಕೇಳಿದ್ದೇನೆ.

ಶ್ರೀ ಆರಗಜ್ಞಾನೇಂದ್ರ:- ನಾವು ಮಾಹಿತಿಗಳನ್ನು ಕೇಳುವುದು ನಮ್ಮ ಹಕ್ಕಿನ ಮೇರೆಗೆ. ಅದನ್ನು ಸಕಾಲದಲ್ಲಿ ಮಾನ್ಯ ಸಚಿವರು ಒದಗಿಸಿಕೊಡಬೇಕು. ಒಂದು ವಾರದಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ.

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಗೆ ಆರೋಗ್ಯ ತಪಾಸಣಾ ಕೇಂದ್ರವನ್ನು ಸ್ಥಾಪಿಸುವುದು

82(790) ಶ್ರೀ ಅಶೋಕ್ ಆರ್. (ಉತ್ತರ ಹಳ್ಳಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಗೆ ಸಂಬಂಧಪಟ್ಟಂತೆ ಬೋಳಾರೆ ಮತ್ತು ಅದರ ಗ್ರಾಮಗಳಲ್ಲಿ ಉಪ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಬೋಳಾರೆ ಮತ್ತು ಆಗರ ಗ್ರಾಮಗಳಲ್ಲಿ ಉಪ ಆರೋಗ್ಯ ತಪಾಸಣಾ ಕೇಂದ್ರಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.